ಹೆರಿಗೆ ಆಗಿತ್ತು. ಇಂವ ಮನೆಯೊಳಗೆ ಬಂದ ಕೂಡಲೇ ತಾಯವ್ವ, 'ದೇವ್ರಾಜ ನಿನ್ಗ ಗಂಡ ಹುಟ್ಯಾನ ನೋಡು...' ಎಂದು ಹರ್ಷ ವ್ಯಕ್ತಪಡಿಸಿದಳು. ಇವನಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಆ ಕೋಣೆಯಲ್ಲಿ ಕೂಸು ಅಳತೊಡಗಿತ್ತು. ಪದ್ಮಾ, 'ಅಳ್ಬ್ಯಾಡ್ದು ಪುಟ್ಟಾ. ನಿಮ್ಮಪ್ಪ ಬರ್ತಾನ ತಡಿ ಈಗ...' ಅಂತ ರಮಿಸತೊಡಗಿದ್ದಳು. ದೇವರಾಜ ಮಾತಿಲ್ಲದೆ ಕೋಣೆಯೊಳಗೆ ಬಂದ. ಅವನನ್ನು ನೋಡಿದ ಪದ್ಮಾ ನಾಚುತ್ತಲೇ ಮಗುವನ್ನು ಅವನ ಕೈಗೆ ಕೊಟ್ಟಳು. ದೇವರಾಜ ಆ ಮಗುವನ್ನು ಕಣ್ತುಂಬಿಕೊಂಡ. ತುಟಿಯಲ್ಲಿ ಹೌದೋ ಅಲ್ಲವೋ ಅನ್ನುವಷ್ಟು ನಗು ಅರಳಿತು. ಮಗುವನ್ನು ಮುದ್ದಿಸಿ ಪದ್ಮಾಳ ಕೈಗೆ ಕೊಟ್ಟು ಹೊರ ಬಂದು ಅಳತೊಡಗಿದ. ತಾಯವ್ವ ಕಣ್ಣೀರು ಒರೆಸಿ ರಮಿಸಿದಳು.

ದೇವರಾಜ ಎಂದಿನಂತೆ ಊಟ ಮಾಡಿ ರಾತ್ರಿ ಮಲಗಲು ಹನುಮಪ್ಪನ ಗುಡಿಗೆ ಬಂದ. ಗುಡಿಯೊಳಗಿನ ದೀಪ ತನ್ನ ಪಾಡಿಗೆ ತಾನು ಬೆಳಗತೊಡಗಿತ್ತು. ಆಗಲೇ ಹತ್ತಾರು ಜನ ಹೊದ್ದುಕೊಂಡು ಮಲಗಿದ್ದರು. ಕಣ್ಣ ಬಳಿ ಮಗುವಿನ ಚಿತ್ರವೇ ಮೂಡಿದಂತಾಗಿ ಅವನಿಗೆ ನಿದ್ದೆ ಬರಲಿಲ್ಲ. ತುಸು ಹೊತ್ತು ಹಾಗೇ ಕಳೆದ. ಮಲಗಿದ ಕೆಲವರಲ್ಲಿ ಗೊರಕೆ ತೆಗೆದಿದ್ದರು. ಅವನಿಗೆ ಮತ್ತೆ ಮತ್ತೆ ಮಗುವಿನ ಅಳು, ಅದರ ಮುಖ ಕಣ್ಣೆದುರು ಮೆರವಣಿಗೆ ಹೊರಟಂತೆ ಭಾಸವಾಗತೊಡಗಿತು. ಪದ್ಮಾಳೊಂದಿಗೆ ಮಲಗಿದವನನ್ನು ಈಗ ಸುಲಭವಾಗಿ ಪತ್ತೆ ಹಚ್ಚಬಹುದು ಅನಿಸಿತವನಿಗೆ. ಮಲಗಿರುವವರು ಮುಖದ ಮ್ಯಾಲೆ ಹೊದ್ದ ಕೌದಿ ಸರಿಸಿ ನೋಡತೊಡಗಿದ. ಐದಾರು ಜನರನ್ನು ನೋಡಿರಬೇಕು. ಅದರಲ್ಲಿ ಮಗುವಿನ ಮುಖ ಹೋಲುವವರು ಯಾರೂ ಕಾಣಲಿಲ್ಲ. ಮತ್ತೆ ಉಳಿದವರ ಮುಖದ ಮ್ಯಾಲಿನ ಕೌದಿ ಸರಿಸಿ ನೋಡತೊಡಗಿದ. ಕೌದಿ ಸರಿಸಿದರೆ ಒಬ್ಬನು ದಿಂಬಿಗೆ ಮುಖ ಮಾಡಿ ದಬ್ಬು ಮಲಗಿದ್ದ. ದೇವರಾಜ ಅವನನ್ನು ಹಗುರ ಹೊರಳಿಸಿದ. ಆದರೆ, ಅವನು ನಿದ್ದೆ ಕದಡಿದವನಂತಾಗಿ ಎದ್ದು ಕುಳಿತ. ದೇವರಾಜ ಅವನನ್ನು ದಿಟ್ಟಿಸಿ ನೋಡಿದ. ಮಗುವಿನ ಹೋಲಿಕೆ ಕಂಡಂತಾಯಿತು. ಮತ್ತೆ ಮತ್ತೆ ನೋಡಿದ. 'ಲೇ ನನ್ನ ಹೆಂಡತಿ ಜೊತಿ ನೀನೇ ಹೌದಿಲ್ಲ ಮಲ್ಕೊಂಡಾಂವ. ಖರೆ ಹೇಳು. ನಿನ್ಗ ಏನೂ ಮಾಡಲ್ಲ...' ಅಂದು ಅವನ ಕೊರಳಪಟ್ಟಿ ಹಿಡಿದ. ಅವನು ಕೈ ಕೊಸರಿಕೊಂಡು ಓಡತೊಡಗಿದ. ದೇವರಾಜ ಅವನ ಬೆನ್ನು ಹತ್ತಿದ. ಇಬ್ಬರೂ ಕತ್ತಲಲ್ಲಿ ಕರಗಿದರು.

## ಟಿ.ಎಸ್. ಗೊರವರ

ಲೇಖಕರು ಗದಗ ಜಿಲ್ಲೆಯ ರೋಣ ತಾಲೂಕಿನ ರಾಜೂರ ಗ್ರಾಮದವರು. ರಾಜೂರು, ಗಜೇಂದ್ರಗಡದಲ್ಲಿ ವಿದ್ಯಾಭ್ಯಾಸ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು ಕೆಲಕಾಲ ಪತ್ರಕರ್ತರಾಗಿದ್ದರು.

ಪ್ರಕಟಿತ ಪುಸ್ತಕಗಳು: 'ಭ್ರಮೆ', 'ಕುದರಿ ಮಾಸ್ತರ' (ಕಥಾ ಸಂಕಲನಗಳು), 'ಆಡು ಕಾಯೋ ಹುಡುಗನ ದಿನಚರಿ'(ಅನುಭವ ಕಥನ), 'ರೊಟ್ಟಿ ಮುಟಗಿ'(ಕಾದಂಬರಿ).